International Journal of Kannada Research 2023; 9(3): 94-98

International Journal of Kannada Research
www.kannadajournal.com

ISSN: 2454–5813
IJKR 2023; 9(3): 94-98
© 2023 IJKR
www.kannadajournal.com
Received: 22-05-2023
Accepted: 28-06-2023

**ಡಾ.ದಿಲೀಪ್.ಎಸ್**
ಸಹಾಯಕ ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಕ.ರಾ.ಮು.ವಿ.ಮೈಸೂರು,
ಕರ್ನಾಟಕ, ಭಾರತ

**Corresponding Author:**
**ಡಾ.ದಿಲೀಪ್.ಎಸ್**
ಸಹಾಯಕ ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಕ.ರಾ.ಮು.ವಿ.ಮೈಸೂರು,
ಕರ್ನಾಟಕ, ಭಾರತ

# ಶಾಸನಗಳ ಹಿನ್ನೆಲೆಯಲ್ಲಿ ಗುಂಡ್ಲುಪೇಟೆ ತಾಲೋಕು ಪ್ರದೇಶದ ಗ್ರಾಮಗಳ ಸಾಂಸ್ಕೃತಿಕ ಇತಿಹಾಸ ಕುರಿತ ಪರಿಚಯ

**ಡಾ.ದಿಲೀಪ್.ಎಸ್**

**ಪೀಠಿಕೆ**

ಗುಂಡ್ಲುಪೇಟೆ ತಾಲೋಕು ಪ್ರದೇಶದ ವ್ಯಾಪ್ತಿಯಲ್ಲಿ ಲಭ್ಯವಾಗಿರುವ ಶಾಸನಗಳ ಮೂಲಕ ಈ ಪ್ರದೇಶದ ಗ್ರಾಮಗಳ ಸಾಂಸ್ಕೃತಿಕ ಇತಿಹಾಸದ ಪ್ರಾಮುಖ್ಯತೆಯನ್ನು ವಿಶೇಷವಾಗಿ ಗುರುತಿಸಲಾಗಿ. ಸಾಂಸ್ಕೃತಿಕ ಇತಿಹಾಸವು ಒಂದು ನಿರ್ದಿಷ್ಟ ಅವಧಿ ಮತ್ತು ಪ್ರದೇಶದಿಂದ ಕಲಾಕೃತಿಗಳು, ಕಟ್ಟಡಗಳು ಹಾಗೂ ಸ್ಮಾರಕಗಳ ಪುನರಾವರ್ತಿತ ಸಂಯೋಜನೆಯಾಗಿದ್ದು, ಅದು ನಿರ್ದಿಷ್ಟ ಹಿಂದಿನ ಮಾನವ ಸಮಾಜದ ಭೌತಿಕ ಸಂಸ್ಕೃತಿಯ ಅವಶೇಷಗಳನ್ನು ರಚಿಸಿದ್ದಾರೆ. ಸಾಂಸ್ಕೃತಿಕ ಗುಂಪುಗಳು ವಿವಿಧ ಸಾಂಸ್ಕೃತಿಕ ಹಾಗೂ ಸಾಮಾಜಿಕ ಆಚರಣೆಗಳಿಂದ ಕ್ರಿಯಾತ್ಮಕವಾಗಿ ಮತ್ತು ಕಲಾತ್ಮಕವಾಗಿ ಭಿನ್ನವಾಗಿವೆ. ವಸ್ತು ಸಂಸ್ಕೃತಿಯ ವಸ್ತುಗಳನ್ನು ಹೊಂದಿವೆ. ಈ ಕಲ್ಪನೆಯು ವಿಶಾಸವಾದ ಮಾದಿಕಗಳಲ್ಲಿ ಗಮನಿಸುವುದಾದ ಸತ್ಯವಾಗಿದೆ. ಆದ್ದರಿಂದಲೇ ಯಾವುದೇ ಒಂದು ಪ್ರದೇಶದಲ್ಲಿನ ಸಾಂಸ್ಕೃತಿಕ ಇತಿಹಾಸದಲ್ಲಿ ಕಲೆ ಮತ್ತು ವಾಸ್ತುಶಿಲ್ಪ, ಸ್ಮಾರಕಗಳು ಮತ್ತು ಚಿತ್ರಕಲೆಗಳೂ ಕೂಡ ಪ್ರಧಾನವಾದಂತಹ ಅಂಶಗಳನ್ನು ಸಾದರಪಡಿಸುತ್ತವೆ. ಗುಂಡ್ಲುಪೇಟೆ ಪ್ರದೇಶದಲ್ಲಿ ಸರಿಸುಮಾರು 10 ಶಾಸನಗಳು ಗಂಗರ ಆಳ್ವಿಕೆಗೆ ಸಂಬಂಧಿಸಿದ್ದು, ಗಂಗ ಅರಸರಾದ ಶ್ರೀಪುರುಷ ಕೊಂಗಣಿವರ್ಮ, ಸತ್ಯವಾಕ್ಯ ಪೆರ್ಮಾನಡಿ, ರಾಚಮಲ್ಲ ಹಾಗೂ ನೀತಿಮಾರ್ಗ ಪೆರ್ಮಾನಡಿಯ ಆಳ್ವಿಕೆಯನ್ನು ತಿಳಿಸುತ್ತವೆ. ಚೋಳರಿಗೆ ಸಂಬಂಧಿಸಿದ 5 ಶಾಸನಗಳು, ಹೊಯ್ಸಳರ ಕಾಲಾವಧಿಯ 35 ಶಾಸನಗಳು ಲಭ್ಯವಾಗಿವೆ. ದೇವರಹಳ್ಳಿಯ ಶಾಸನದಲ್ಲಿ ಗಂಗರ ವಂಶಾವಳಿಯನ್ನು ಮುಂದಿನಂತೆ ನೀಡಿದೆ. ಕೊಂಗುಣಿ, ಮಾಧವ, ವಿಷ್ಣುಗೊತ್ತಮ, ಅವನೀತ, ದುರ್ವಿನೀತ, ವಿಕ್ರಮ, ದುಗ್ಗ, ಶಿವಮಾರ ಮತ್ತು ಕೊಂಗುಣಿ.ಈ ವಂಶಾವಳಿಯಲ್ಲಿ ಹರಿವರ್ಮ ಮತ್ತು ಮುಷ್ಕರರ ಹೆಸರುಗಳು ಇಲ್ಲದಿರುವುದು ಗಮನಾರ್ಹ.ಅರೆಪುರ ಗ್ರಾಮದಲ್ಲಿನ ಮಾರಿಗುಡಿಯ ಬಲಗಡೆ ಬಿದ್ದಿರುವ ದೊಡ್ಡ ತುಂಡುಕಲ್ಲಿನಲ್ಲಿ ದೊರೆತಿರುವ ಈ ಶಾಸನದ ಕಾಲಮಾನವು 16ನೇ ಶತಮಾನದಾಗಿದ್ದು ಇದು ಒಂದು ದಾನ ಶಾಸನವಾಗಿದೆ.ಈ ಶಾಸನವು ವಿರೂಪಗೊಂಡಿದ್ದು, ಈ ಊರಿನ ಒಂದು ಕುಟುಂಬಕ್ಕೆ ರಕ್ತ ಕೊಡುಗೆಯಾಗಿ ತೋಟ, ಮನೆ, ಕೊಟಾರಗಳನ್ನು ಸೂರ್ಯ–ಚಂದ್ರ ಇರುವ ತನಕ ಅನುಭವಿಸಿಕೊಂಡು ಹೋಗಿ ಎಂದು ಬರೆಸಿರುವುದನ್ನು ಗುರುತಿಸಲಾಗಿದೆ.

ಅವುತುಗೊಂಡಹಳ್ಳಿಗ್ರಾಮದಲ್ಲಿನ ಬಸವನಗುಡಿಗೆ ಪಶ್ಚಿಮ ಕಡೆಗೆ ನೆಟ್ಟಿರುವ ಸರಿಸುಮಾರು ಕ್ರಿ.ಶ. 1528ಕ್ಕೆ ಸೇರಿರುವ ಈ ಶಾಸನವು ವಿಜಯನಗರದ ದೊರೆ ಸದಾಶಿವರಾಯನ ಕಾಲಕ್ಕೆ ಸೇದ್ದಾಗಿರುತ್ತದೆ.ಇದರಲ್ಲಿ ಸದಾಶಿವರಾಯನ ಅಧಿಕಾರಿ ತುಸಾಂಬಕಒಡೆಯನ ನಿರೂಪದಿಂದ ವಾಗರಸರು ಮೃತ್ಯುಂಜಯ ಒಡೆಯರಿಗೆ ಅವುತುಗೊಂಡಹಳ್ಳಿ ಗ್ರಾಮವನ್ನು ಕೊಡುಗೆಯಾಗಿಯೇ ನೀಡಿರುವುದು ತಿಳಿದುಬರುತ್ತದೆ.ಆಲತ್ತೂರು ಗ್ರಾಮದಲ್ಲಿನ ಮನೆಯೊಂದರ ಓಣಿಯಲ್ಲಿ ನಿಂತಿರುವ ಕ್ರಿ.ಶ. 1283ಕ್ಕೆ ಸೇರಿದ ಈ ಶಾಸನವು ಹೊಯ್ಸಳ ರಾಜನಾಗಿದ್ದ ವೀರ ಬಲ್ಲಾಳದೇವನ ಕಾಲಕ್ಕೆ ಸೇರಿದ್ದಾಗಿದೆ.ನೀಲಗಿರಿಸಾದಾರ ಮುಂತಾದ ಬಿರುದುಳ್ಳ ಶ್ರೀಮನ್ ಮಹಾಪ್ರಧಾನ ಪೆರಮಾಳೇದೇವ ದಣ್ಣಾಯಕನು ಆಳುತ್ತಿರಲು ಕುಡುಗುನಾಡ ಆಲತ್ತೂರ ಕೆಂಪಗೌಡನ ಮಗ ಸಿಂಗಗೌಡನ ಓಲೆಯಕಾರ ಮಾರೆಯ ಹುಲಿಯನ್ನು ಕೊಂದು ಸ್ವರ್ಗಕ್ಕೆ ಸಂದ ವಿಚಾರ ತಿಳಿದುಬರುತ್ತದೆ.ಎರೆಯೂರು ಗ್ರಾಮದಲ್ಲಿನ ಊರ ಮುಂದೆ ಕ್ರಿ.ಶ. 1607ರ ಈ ಶಾಸನವು ಮಹಾಮಂಡಲೇಶ್ವರನಾದ ರಾಮರಾಜ ತಿರುಮಲ ರಾಜಯ್ಯನವರು ಎರೆಯೂರನ್ನು ದಾನಕೊಟ್ಟರು ಎಂದಿದ್ದು, ಯಾರಿಗೆ ಎಂಬ ಭಾಗ ಅಳಿಸಿಹೋಗಿದ್ದು ಶಿಥಿಲಗೊಂಡಿರುವ ಶಾಸನವಾಗಿದೆ.ಇದೇ ಎರೆಯೂರು ಗ್ರಾಮದಲ್ಲಿನ ಪಾದಚಾವಡಿ ಪಕ್ಕದಲ್ಲಿರುವ ಈಶಾಸನದಲ್ಲಿ ಯರೆಯೂರು ಗ್ರಾಮವನು ದಾನ" ನೀಡಿರುವ ಬಗೆಗೆ, ಹಾಗೆಯೇ ಈ ಶಾಸನದಲ್ಲಿ

ಇಸವಿ ನಮೂದಾಗಿಲ್ಲ ತುರುಗಳನ್ನು ರಕ್ಷಿಸಲು ಹೋರಾಡಿದ ಮಹಾದೇವ ಎಂಬ ವ್ಯಕ್ತಿಗೆ ಭತ್ತದ ಗದ್ದೆಯನ್ನು ಬಿಟ್ಟ ವಿಚಾರವಿದೆ.ದಾನ ಕೊಟ್ಟವರ ಬಗೆಗೆ ಯಾವುದೇ ರೀತಿಯ ಮಾಹಿತಿ ಕೂಡ ಇರುವುದಿಲ್ಲ.

ಕಗ್ಗಳ ಗ್ರಾಮದಲಿನ ಊರ ಬಾಗಿಲ ಬಳಿ ನಿಂತಿರುವ ಕ್ರಿ.ಶ. 1558ರ ಕಾಲದ ಈ ಶಾಸನವು ವಿಜಯನಗರದ ಅಚ್ಯುತರಾಯನ ಕಾಲಕ್ಕೆ ಸೇರಿದ್ದಾಗಿದೆ.ಮಹಾಮಂಡಲೇಶ್ವರರಾದ ದೇವಪಾಲ ಮಹಾಅರಸುಗಳು ಕಗ್ಗನಳದ ಗೌಡಪ್ರಜೆಗಳಿಗೆ ಕೊಟ್ಟ ಶಿಲಾಶಾಸನವಾಗಿದ್ದು ಭೂಮಿಯನ್ನು ಉಳುವವರಿಗೆ ಕೊಟ್ಟ ಪಡಿಮರ್ಯಾದೆಯನ್ನು ತಿಳಿಸುತ್ತದೆ.ಕಣ್ಣಾಗಾಲ ಗ್ರಾಮದಲ್ಲಿನ ಊರಿಗೆ ಪೂರ್ವದ ಶಾಸನದಯ್ಯನ ಗುಡಿಯಲ್ಲಿ ಲಭ್ಯವಾಗಿರುವ ಪದಿನಾಲ್ಕು ನಾಡನ್ನು ಆಳುತ್ತಿದ್ದ ಮಾಧವದಣ್ಣಾಯಕನು ಕ್ರಿ.ಶ. 1315ರ ಶಾಸನವೊಂದರಲ್ಲಿ ಗೋವರ್ಧನಗಿರಿಯಲ್ಲಿ ಗೋಪಿನಾಥದೇವರನ್ನು ಪ್ರತಿಷ್ಠಾಪನೆ ಮಾಡಿಸಿ ಅದರ ಅಂಗ–ರಂಗ, ಭೋಗ ತಿರುವಳಿಯೂಟಕ್ಕಾಗಿ ಕಣ್ಣಾಗಾಲ ಗ್ರಾಮವನ್ನು ದತ್ತಿಬಿಟ್ಟ ವಿಚಾರವಿದೆ.ಹಾಗೆಯೇ ಈತನು ಪೆರುಮಾಳೆ ದಣ್ಣಾಯಕನ ಮಗನಾಗಿದ್ದನು ಎಂಬುದು ದಾಖಲಾಗಿದೆ.

ಕಮರಹಳ್ಳಿ ಗ್ರಾಮದಲ್ಲಿ ಉಪ್ಪರಿಗೆ ಬಸವ ದೇವಾಲಯದ ದಕ್ಷಿಣದಲ್ಲಿ ನಿಂತಿರುವಂತಹ ಕ್ರಿ.ಶ. 1567ರಲ್ಲಿ ರಚಿತವಾಗಿರುವ ಸೇರಿದ ಈ ಕಲ್ಲು ಶಾಸನವು ಈ ಗ್ರಾಮದಲ್ಲಿರುವ ಬಸವೇಶ್ವರ ದೇವರಿಗೆ ಕೂರಿಗನಹಳ್ಳಿಯ ಜುಂಜೊಡೆಯರ ಶಿಷ್ಯ ಕರಿಬಸವ ಒಡೆಯರ ಮಗನಾದ ಲಿಂಗದೇವ ಒಡೆಯರು ದಾನ ದತ್ತಿಟ್ಟಿರುವಂತಹ ಮಾಹಿತಿಯು ದಾಖಲೀಕರಣಗೊಂಡಿದೆ. ಕರಕಲ ಮಾದಹಳ್ಳಿ ಗ್ರಾಮದಲ್ಲಿನ ಊರ ಮುಂದೆ ಇರುವ ಕ್ರಿ.ಶ. 1497ಕ್ಕೆ ಸೇರಿದ ಈ ಶಾಸನವು ಉಮ್ಮತ್ತೂರಿನ ಮುಖ್ಯಸ್ಥರು ಹಾಗೂ ಪಾಳೇಯಗಾರನಾದ ಚನ್ನನಂಜರಾಜ ಒಡೆಯನು ಮಾದಹಳ್ಳಿಯನ್ನು ಅಗ್ರಹಾರವಾಗಿ ಪರಿವರ್ತಿಸಿ 'ಚನ್ನನಂಜರಾಯಪುರ'ವೆಂದು ಪುನರ್‌ನಾಮಕರಣ ಮಾಡಿ ನರಸಿಂಹಭಟ್ಟ ಎಂಬುವರಿಗೆ ದಾನವಾಗಿ ನೀಡಿರುವ ಬಗೆಗೆ ದಾಖಲೀಕರಣಗೊಂಡಿದೆ.ಕಂದಾಗಾಲ ಗ್ರಾಮದ ಕೆರೆಗೆ ಪಶ್ಚಿಮ ಹೊಲವೊಂದರ ಪಕ್ಕದಲ್ಲಿ ಬಿದ್ದಿರುವ 12ನೇ ಶತಮಾನದ ಕಲ್ಲು ಶಾಸನವು ಸೋಮೇಶ್ವರದೇವರಿಗೆ ದಾನ ನೀಡಿದ ವಿಚಾರವನ್ನು ತಿಳಿಸುತ್ತದೆ. ಇದೇ ಗ್ರಾಮದಲ್ಲಿ 184ನೇ ಶಾಸನದ ಸಮೀಪದಲ್ಲಿ ನಿಂತಿರುವ ಗಾಣದ ಮೇಲೆ ಇರುವ ಕ್ರಿ.ಶ. 1334ರ ಕೇತೆಯ ದಣ್ಣಾಯಕನ ಆಳ್ವಿಕೆಗೆ ಸೇರಿದ ಈ ಶಾಸನವು ಒಂದೇ ಕುಟುಂಬಕ್ಕೆ ಸೇರಿದ ಸೋದರರು ತಮ್ಮ ಎಣ್ಣೆ ಉತ್ಪಾದನೆಯ ಒಂದು ಭಾಗವನ್ನು ಕಂದಾಗಾಲದ ಸೋಮನಾಥದೇವರ ನಂದಾದೀವಿಗೆಗಾಗಿ ಸಲ್ಲಿಸುತ್ತಿದ್ದ ಸಂಗತಿಯನ್ನು ತಿಳಿಸುತ್ತದೆ.

ಕೆಲಸೂರು ಗ್ರಾಮದಲ್ಲಿನ ಬಸದಿಯೊಳಗೆ ಗೋಡೆಯಮೇಲಿರುವ 19ನೇ ಶತಮಾನದ ಈ ಶಾಸನವು ಮೈಸೂರಿನ ದೊರೆ ಮೂರನೇ ಕೃಷ್ಣರಾಜ ಒಡೆಯರು ಕೆಲಸೂರಿನಲ್ಲಿರುವ ಚೈತ್ಯಾಲಯವನ್ನು ಜೀರ್ಣೋದ್ಧಾರ ಮಾಡಿಸಿ, ಚಂದ್ರಪ್ರಭತೀರ್ಥಂಕರ, ವಿಜಯ ಮತ್ತು ಜ್ವಾಲಾಮಾಲಿನೀ ದೇವತೆಗಳ ವಿಗ್ರಹಗಳನ್ನು ನೀಡಿರುವ ವಿಷಯವನ್ನು ತಿಳಿಸುತ್ತದೆ. ಇದೇ ಗ್ರಾಮದಲ್ಲಿನ ಬಸದಿಯ ಪಶ್ಚಿಮ ದಿಕ್ಕಿನ ಕಾಳಿಯಲ್ಲಿ ನೆಟ್ಟಿರುವ ಕ್ರಿ.ಶ. 1229ರ ಕಾಲದ ಈ ಶಾಸನವು ಹೊಯ್ಸಳರ ವೀರನಾರಸಿಂಹನ ರಾಜ್ಯಾಡಳಿತದಲ್ಲಿ ಕುಲಗಾಣದ ಶಂಕರಗೌಡರಸನ ಅಧಿಕಾರಿಗಳಾದ ಗೋಪಣ್ಣ ಮತ್ತು ರಂಗಯ್ಯರು ಕೆಲಸೂರು ಬಸದಿಗೆ ದತ್ತಿ ಬಿಟ್ಟ ವಿಚಾರ ತಿಳಿಸುತ್ತದೆ.ಇದೇ ಗ್ರಾಮದ ಬಸದಿಯ ತಳಪಾದಿ ಕಲ್ಲಿನ ಮೇಲೆ ಇರುವ 12ನೇ ಶತಮಾನಕ್ಕೆ ಸೇರಿದ ಚೋಳರ ಕಾಲದ ಈ ಶಾಸನವು ತಮಿಳು ಭಾಷೆಯಲ್ಲಿದ್ದು ವಿಕ್ರಮಚೋಳ ಪೆರ್ಮಾನಡಿ ಗಾಮುಂಡನೆಂಬುವನು ಕೆಲಸೂರಿನ ಚಂದ್ರಪ್ರಭ ಬಸದಿಗೆ ದತ್ತಿ ಬಿಟ್ಟ ವಿಚಾರ ತಿಳಿಸುತ್ತದೆ.

ಕೋಟೆಗೆರೆ ಗ್ರಾಮದಲ್ಲಿನ ಗಣಪತಿ ದೇವಸ್ಥಾನಕ್ಕೆ ಪೂರ್ವದಲ್ಲಿರುವ ಕ್ರಿ.ಶ. 1548ಕ್ಕೆ ಸೇರಿದ ಈ ಶಾಸನವು ವಿಜಯನಗರದ ದೊರೆ ಸದಾಶಿವರಾಯನ ಕಾಲಕ್ಕೆ ಸೇರಿದ್ದು, ಈತನ ಕಾರ್ಯಕರ್ತನಾದ ಸೂರಪ್ಪ ಆರಿಚನಿಯು ತಾನು ಪಡೆದಿದ್ದ ಕೋಟೆಯಕೆರೆ ಹಾಗು ರಾಮನಪುರವನ್ನು ಗುತ್ತಿಗೆಯಾಗಿ ಮರಿಹಳ್ಳಿ ಬೋಳನಂಜಯ ದೇವರಿಗೆ ಕೊಟ್ಟವಿಚಾರ ತಿಳಿಸುತ್ತದೆ.ಕೋಡಿಹಳ್ಳಿ ಗ್ರಾಮದ ಮಾರಿಗುಡಿ ಬಳಿ ಬಿದ್ದಿರುವ ಕಲ್ಲಿನಲ್ಲಿರುವ ಕ್ರಿ.ಶ. 1521ರ ಈ ಶಾಸನ ವಿಜಯನಗರದ ಸಾಳುವ ಗೋವಿಂದರಾಜನ ಕಾಲಕ್ಕೆ ಸೇರಿದ್ದು, ತ್ರಿಯಂಬಕಪುರದ ತ್ರಿಯಂಬಕೇಶ್ವರ ದೇವರಿಗೆ ಅಮೃತಪಡಿ ಅಂಗರಂಗ ವೈಭವ ನಡೆಸಲು ವಿವಿಧ ಗ್ರಾಮಗಳು ನೀಡಬೇಕಾದ ತೆರಿಗೆಯನ್ನು ತಿಳಿಸುತ್ತದೆ.ಗುಂಡ್ಲುಪೇಟೆ ನಗರ ಪ್ರದೇಶದಲ್ಲಿನ ಕೋಟೆಯೊಳಗೆ ಬಸ್ತಿಮಾಳದಲ್ಲಿ ನೆಟ್ಟಿರುವ ಎರಡನೆಯ ಕಲ್ಲಿನ 16ನೇ ಶತಮಾನದ ಈ ಶಾಸನವು ಸಮಸ್ತಗೌಡ ಪ್ರಜೆಗಳಲ್ಲಿ ಮುಖ್ಯಸ್ಥನಾದ ಬೈಚಣ್ಣನು ವಿಜಯಪುರದ ಅನಂತದೇವರಿಗೆ ಬೆದ್ದಲು ಭೂಮಿಯನ್ನು ದತ್ತಿಬಿಟ್ಟ ವಿಚಾರವಿದೆ.ಇದೇ ಗುಂಡ್ಲುಪೇಟೆ ನಗರದಲ್ಲಿನ ರಾಮೇಶ್ವರ ದೇವಸ್ಥಾನದ ಗರ್ಭಗೃಹದ ದಕ್ಷಿಣ ಕಡೆ ತಳಪಾದಿಯಲ್ಲಿನ ಈ ಶಾಸನದಲ್ಲಿ 'ವಿಜಯಪುರ' ವೆಂದೇ ಕರೆದಿದೆ.ಕ್ರಿ.ಶ. 1372ರ ಈ ಶಾಸನವು ವಿಜಯನಗರದ ವೀರಬುಕ್ಕರಾಯನ ಮಗ ಚಿಕ್ಕಕಂಪಣ ಒಡೆಯನ ಆಳ್ವಿಕೆಯ ಕಾಲವಾಗಿದ್ದು ಪ್ರಜೆಗಳು ರಾಮನಾಥದೇವರ ಪಾತ್ರಭೋಗಕ್ಕೆ ಕೊಡಬೇಕಾದ ಕಂದಾಯವನ್ನು ತಿಳಿಸುತ್ತದೆ.

ಚಿಕ್ಕಣಾಪುರ ಗ್ರಾಮದಲ್ಲಿರುವ ಪಾಳುಗ್ ರಾಮ ನಿವೇಶನದಲ್ಲಿ ಬಿದ್ದಿರುವ ಕಲ್ಲಿನಲ್ಲಿ ಕ್ರಿ.ಶ. 1482ರ ಕಾಲದ ಈ ಶಾಸನವು ಮಂಡಳೇಶ್ವರ ವೀರನಂಜರಾಜ ಒಡೆಯರ ಆಳ್ವಿಕೆಯಲ್ಲಿ ಚಿಕ್ಕಣಾಪುರವನ್ನು ಉಂಬಳಿಯಾಗಿ, ತೆರಕಣಾಂಬಿಯ ಅಂಗಡಿ ವೀರಭದ್ರದೇವರಿಗೆ ಬಿಟ್ಟ ವಿಚಾರವನ್ನು ತಿಳಿಸುತ್ತದೆ. ಚೀರಕನಹಳ್ಳಿ ಗ್ರಾಮದಲ್ಲಿನ ಚಾವಡಿ ಮುಂದೆ ನಿಂತಿರುವ ಕಲ್ಲು 16ನೇ ಶತಮಾನದ ಈ ಶಾಸನವು ತ್ರುಟಿತವಾಗಿದ್ದು ಅಲ್ಲಪ್ಪ ಶೆಟ್ಟಿಯ ಮಕ್ಕಳಾದ ದೇವರಾಯ ಒಡೆಯರು ಚೀರಕನಹಳ್ಳಿಯ ಗ್ರಾಮದ ಗದ್ದೆ, ಬೆದ್ದಲು, ತೋಟದ ಆದಾಯವನ್ನು ಮಠಕ್ಕೋ, ದೇವಾಲಯಕ್ಕೋ ಬಿಟ್ಟಿರುವಂತೆ ತಿಳಿಸುತ್ತದೆ.ತಗ್ಗಲೂರು ಗ್ರಾಮಕ್ಕೆ ಪೂರ್ವ ಹೊಲವೊಂದರಲ್ಲಿ ಬಿದ್ದಿರುವ ಗಂಗರ ಅರಸ ಶ್ರೀಪುರುಷನ ಕಾಲಕ್ಕೆ ಸೇರಿರುವ ಈ ಶಾಸನದಲ್ಲಿ ಇಸವಿ ನಮೂದಾಗಿಲ್ಲ. 'ಆವುಕ್ಕ' ಎಂಬ ವ್ಯಕ್ತಿ ಈ ಗ್ರಾಮಕ್ಕೆ ದತ್ತಿಬಿಟ್ಟ ವಿಚಾರವಿದೆ.ತ್ರಿಯಂಬಕಪುರ ಗ್ರಾಮದ ಅದೇ ತ್ರಿಯಂಬಕೇಶ್ವರ ದೇವಸ್ಥಾನದ ಮಹಾದ್ವಾರದ ಒಳಭಾಗದಲ್ಲಿ ಉತ್ತರ ಕಡೆಗೆ ನೆಟ್ಟಿರುವ ಈ ಶಾಸನ ಕ್ರಿ.ಶ.1513ನೇ ಅಕ್ಟೋಬರ್ ಸೇರಿದ್ದು ಶ್ರೀ ವೀರಪ್ರತಾಪ ಶ್ರೀವೀರಕೃಷ್ಣರಾಯ ಮಹಾರಾಯರು ತ್ರಿಯಂಬಕದೇವರಿಗೆ ವಿವಿಧ ಗ್ರಾಮದಲ್ಲಿರುವ ವಿವಿಧ ವೃತ್ತಿಯ ಜನರು ನೀಡಬೇಕಾದ ತೆರಿಗೆಯ ಬಗ್ಗೆ ಪ್ರಸ್ತಾಪಿಸುತ್ತದೆ.

ತೆರಕಣಾಂಬಿ ಗ್ರಾಮದಲ್ಲಿನ ಮೂಲಸ್ಥಾನೇಶ್ವರ ದೇವಾಲಯದ ಒಳಬಾಗಿಲಿಗೆ ದಕ್ಷಿಣದ ಕಡೆ ನೆಟ್ಟಿರುವ ಕ್ರಿ.ಶ. 1504ನೇ ಅಕ್ಟೋಬರ್ 18ರ ಕಾಲದ ಈ ಕಲ್ಲಿನ ಶಾಸನದಲ್ಲಿ ತೆರಕಣಾಂಬಿಯ ಮೂಲಸ್ಥಾನೇಶ್ವರ ದೇವಾಲಯಕ್ಕೆ ಅಂಗ–ರಂಗಭೋಗ, ನೈವೇದ್ಯ ಮತ್ತು ರಥೋತ್ಸವಕ್ಕಾಗಿ ದತ್ತಿ ಬಿಟ್ಟಿರುವ ವಿಚಾರವಿದೆ. ಇದೇ ಗ್ರಾಮದ ರಾಮಭದ್ರ ದೇವಾಲಯದ ಪಾತಾಳಾಂಕಣದಲ್ಲಿ ನೆಟ್ಟ ಕ್ರಿ.ಶ. 1521ನೇ ಜನವರಿ 3ರ ಈ ಕಲ್ಲು ಶಾಸನವು ಕೃಷ್ಣದೇವರಾಯನಿಗೆ ಪುಣ್ಯವಾಗಲೆಂದು ಮಹಾಪ್ರಧಾನ ಸಾಳುವ ಗೋವಿಂದರಾಜಯ್ಯನು ತೆರಕಣಾಂಬಿಯ ಆಳ್ವಾರದೇವರ

ರಥೋತ್ಸವಕ್ಕೆ ದಾನ ನೀಡಿದ ವಿಚಾರವು ತಿಳಿದುಬರುತ್ತದೆ.ತೊಂಡವಾಡಿ ಗ್ರಾಮದಲ್ಲಿ ಹೊಲವೊಂದರಲ್ಲಿ ವೀರಗಲ್ಲು ಸರಿಸುಮಾರು ಕ್ರಿ.ಶ. 975ನೇ ಮೇ–ಜೂನ್ ಶಾಸನ ಸಂಖ್ಯೆ – 59 ರ ಪ್ರಕಾರ; ತೊಂಡವಾಡಿಯಲ್ಲಿದ್ದ ಮಳೆಳುತ್ತಯ್ಯ ಎಂಬುವರ ಮಗನು ಅಯ್ಯಪ್ಪಯ್ಯನು ದಾನವನ್ನು ನೀಡಿರುವ ಬಗೆಗೆ ಉಲ್ಲೇಖಿತಗೊಂಡಿರುತ್ತದೆ.ದೇಶಿಪುರ ಗ್ರಾಮಕ್ಕೆ ನೈಋತ್ಯ ಹೊಲವೊಂದರಲ್ಲಿ ಕ್ರಿ.ಶ. 1665ನೇ ಏಪ್ರಿಲ್ 10ರ ಕಾಲದ ಈ ಶಾಸನವು ಮೈಸೂರು ಅರಸರಾದ ದೇವರಾಜ ಒಡೆಯರು ನಂಜನಗೂಡು ತಾಲ್ಲೂಕು ಮಲ್ಲನಮೂಲೆಯಲ್ಲಿ ವಿರಕ್ತಮಠವನ್ನು ಹೊಸದಾಗಿ ಕಟ್ಟಿಸಿ ಅಲ್ಲಿನ ಸ್ವಾಮಿಯವರಿಗೆ ದೇಶಿಪುರ ಹಾಗು ಹೂಕುಂದ ಗ್ರಾಮಗಳನ್ನು ದಾನಬಿಟ್ಟಿದ್ದನ್ನು ತಿಳಿಸುತ್ತದೆ.

ದೊಡ್ಡತುಪ್ಪೂರು ಗ್ರಾಮದಲ್ಲಿನ ಮನೆಯೊಂದರ ಪೂರ್ವಕ್ಕೆ ಹಾಸುಕೊಂಡಿರುವ ಕಲ್ಲುಗಾಣದ ಮೇಲೆ ಕ್ರಿ.ಶ.1305ನೇ ಅಕ್ಟೋಬರ್ 08ರ ಈ ಶಾಸನವು ತುಪ್ಪೂರ ಅಪ್ಪಗೌಡನ ಮಗನು ಅಲ್ಲಿನ ಚೋಳರಾಮನಾಥದೇವರ ದೀಪೋತ್ಸವಕ್ಕಾಗಿ ಎಣ್ಣೆಯಗಾಣ ನೀಡಿದ ವಿಚಾರವನ್ನು ತಿಳಿಸುತ್ತದೆ.ನಿಟ್ರೆ ಗ್ರಾಮದಲ್ಲಿನ ಮಲ್ಲಿಕಾರ್ಜುನ ದೇವಾಲಯದ ಉತ್ತರ ಗೋಡೆಯ ಹೊರಗಡೆ ಬಿದ್ದಿರುವ ಕ್ರಿ.ಶ. 1009ನೇ ಡಿಸೆಂಬರ್ 24ರ ಕಾಲದ ಈ ಶಾಸನವು ನಿಟ್ರೆಯ ಪೆಮ್ಮಗಾವುಂಡನ ತಮ್ಮ ಬಿದಿವಾಸಯ್ಯ ಎಂಬುವವನು ಆದಿತ್ಯದೇವರನ್ನು ಪ್ರತಿಷ್ಠಾಪನೆ ಮಾಡಿದ ವಿಚಾರವನ್ನು ತಿಳಿಸುತ್ತದೆ.ಪಡುಗೂರು ಗ್ರಾಮದ ಆಚಿಜನೇಯ ದೇವಸ್ಥಾನದ ಮುಂದೆ ನೆಟ್ಟಿರುವ 16ನೇ ಶತಮಾನದ ಈ ಕಲ್ಲು ಶಾಸನವು ವಿಜಯನಗರದ ಸಾಳುವ ಗೋವಿಂದರಾಜನಿಗೆ ಸೇರಿದ್ದು, ಪಡುಗೂರಿನ ಹನುಮಂತ ದೇವರಿಗೆ ಆರುಮಂದಿ ರಾವುತರು ನೀಡಿದ ಕೊಡುಗೆಯನ್ನು ತಿಳಿಸುತ್ತದೆ.ಪಂಚನಹಳ್ಳಿ ಗ್ರಾಮದಲ್ಲಿನ ಊರ ಮುಂದೆ ಬಸವನಗುಡಿಗೆ ದಕ್ಷಿಣ ಕಡೆ ನೆಟ್ಟಿರುವ ಕಲ್ಲಿನಲ್ಲಿ 16ನೇ ಶತಮಾನದ ಈ ಶಾಸನವು ಪಂಚನಹಳ್ಳಿಯ ಸಿದ್ದೇಗೌಡನ ಮಕ್ಕಳಾದ ಪುಟ್ಟದೇವಗೌಡನು ಇಲ್ಲಿನ ಬಸವೇಶ್ವರ ದೇವರಿಗೆ ಕೊಟ್ಟ ಕೊಡುಗೆಯನ್ನು ತಿಳಿಸುತ್ತದೆ.ಪುತ್ತನಪುರ ಗ್ರಾಮದ ಹನುಮಂತರಾಯನ ಗುಡಿಯ ಬಳಿ ಬಿದ್ದಿರುವ ಕ್ರಿ.ಶ. 1670ರ ಈ ಶಾಸನವು ವಿಜಯನಗರದ ಅರಸು ವೆಂಕಟಪತಿರಾಯನ ಆಳ್ವಿಕೆಗೆ ಸಂಬಂಧಿಸಿದ್ದು, ಕೆಂಚ ನಾರಸಿಂಹಶೆಟ್ಟಿ ಎಂಬಾತನು ತೆರಕಣಾಂಬಿಯ ನಡುಕೇರಿಯಲ್ಲಿ ಹನುಮಂತದೇವರ ನೂತನ ಮಂಟಪ ಹಾಗು ಹನುಮಂತದೇವರನ್ನು ಪ್ರತಿಷ್ಠಾಪಿಸಿ ಹಂಗಳ ಸ್ಥಳ, ತೆರಕಣಾಂಬಿ ಸೀಮೆಯ ಪುತ್ತನಪುರವನ್ನು ದಾನವಾಗಿ ಬಿಟ್ಟ ವಿಚಾರವಿದೆ.

ಬಲ್ಲಹಳ್ಳಿ ಗ್ರಾಮದಲ್ಲಿನ ಚೆನ್ನಿಗರಾಯ ದೇವಸ್ಥಾನದ ರಂಗಮಂಟಪದ ಕಂಬದಲ್ಲಿನ ಕ್ರಿ.ಶ.1553ನೇ ಡಿಸೆಂಬರ್ 25ರ ಈ ಶಾಸನವು ಮಾರಿಸೆಟ್ಟಿಯ ಮಗ ಮಾದಿಯಣ್ಣನು ಬಲ್ಲಹಳ್ಳಿಯ ಕೇಸವ ದೇವಾಲಯದ ರಂಗದ ಕಂಬವನ್ನು ಮಾಡಿಸಿಕೊಟ್ಟ ಸಂಗತಿಯನ್ನು ತಿಳಿಸುತ್ತದೆ.ಬಾಚಹಳ್ಳಿ ಗ್ರಾಮದ ಊರ ಮುಂದೆ ಇರುವ ಕ್ರಿ.ಶ. 1598ನೇ ಮಾರ್ಚ್ 24ರ ಕಾಲದ ಈ ಶಾಸನವು ವಿಜಯನಗರದ ಅರಸು ತಿರುಮಲರಾಜಯ್ಯನು ಬಾಚಹಳ್ಳಿ ಗ್ರಾಮವನ್ನು ಹಾಗು ಅಲ್ಲಿನ ಧನಧಾನ್ಯವನ್ನು ಬಿಟ್ಟುಕೊಟ್ಟ ವಿಚಾರವಿದೆ ಯಾರಿಗೆ ಎಂಬುದರ ಉಲ್ಲೇಖವಿಲ್ಲ. ಇದೇ ಗ್ರಾಮದಲ್ಲಿನ ಊರ ಅರಳಿ ಕಟ್ಟೆಯ ಮೇಲೆ ಕ್ರಿ.ಶ.1598ನೇ ಜೂನ್ 28ರ ಈ ಶಾಸನವು ವಿಜಯನಗರದ ತಿರುಮಲರಾಜನ ಆಳ್ವಿಕೆಗೆ ಸಂಬಂಧಿಸಿದ್ದು ಬಾಚಹಳ್ಳಿಯವರು ವಿಜಯಪುರಕ್ಕೆ ಸಲ್ಲಿಸುತ್ತಿದ್ದ ಸುಂಕವನ್ನು ಕೈಬಿಡಬೇಕೆಂದು ತಿಳಿಸುತ್ತದೆ.ಬೆಟ್ಟಹಳ್ಳಿ ಗ್ರಾಮಕ್ಕೆ ಈಶಾನ್ಯ ಸ್ಮಶಾನ ಭೂಮಿಯಲ್ಲಿರುವ ಕಲ್ಲುಗಾಣದ ಮೇಲಿನ ಕ್ರಿ.ಶ. 1311ನೇ ಡಿಸೆಂಬರ್ 21ರ ಈ ಶಾಸನವು ಮಾಧವದಣ್ಣಾಯಕನ ಆಳ್ವಿಕೆಗೆ ಸಂಬಂಧಿಸಿದ್ದು ಬೆಟ್ಟಹಳ್ಳಿಯ ರಾಮಗೌಡನ ಮಗ ಹರುಗೌಡನು ತನ್ನ ತಂದೆ ಸತ್ತಲ್ಲಿ ಎಣ್ಣೆಯ ಗಾಣವು ಧರ್ಮಕ್ಕೆ ಸೇರುತ್ತದೆ ಎಂದು ಬರೆಸಿರುವುದಾಗಿದೆ.

ಬೆಳಚಲವಾಡಿ ಗ್ರಾಮದಲ್ಲಿನ ಊರ ಬಾಗಿಲಿಗೆ ದಕ್ಷಿಣದಲ್ಲಿರುವ 10ನೇ ಶತಮಾನದ ಈ ಕಲ್ಲು ಶಾಸನವು ಅಂದಿನ ಕಾಲದಲ್ಲಿ ಪ್ರಾಂತ್ಯಗಳನ್ನು ನಾಡುಗಳಾಗಿ ವಿಂಗಡಿಸುತ್ತಿದ್ದ ಸಂಗತಿಯನ್ನು ತಿಳಿಸುತ್ತದೆ.ಇದೇ ಗ್ರಾಮದಲ್ಲಿನ ಕ್ರಿ.ಶ. 1171ನೇ ಜುಲೈನ ರಾಮಲಿಂಗ ದೇವಸ್ಥಾನಕ್ಕೆ ದಕ್ಷಿಣ ಕಡೆ ಇರುವ ಈ ಶಾಸನವು ಹೊಯ್ಸಳರ ನಾರಸಿಂಹನ ಕಾಲಕ್ಕೆ ಸೇರಿದ್ದು, ಬೆಳಚಲವಾಡಿಯ ಶೀತಳರಾಮನಾಥದೇವರ ಪೂಜಾನೈವೇದ್ಯಕ್ಕೆ ಹೆಗ್ಗಡೆಕಲ್ಲಯ್ಯನು ದತ್ತಿಬಿಟ್ಟ ವಿಚಾರ ತಿಳಿಸುತ್ತದೆ.ಬೇಗೂರು ಗ್ರಾಮದ ಆಂಜನೇಯಗುಡಿಯ ಮುಂದೆ ನಿಂತಿರುವ ಕ್ರಿ.ಶ. 1663–64ರ ಕಾಲಮಾನದ ಈ ಶಾಸನ ತ್ರುಟಿತವಾಗಿದ್ದು ದಾನವನ್ನು ಕೊಟ್ಟ ಹಾಗು ಪಡೆದ ವ್ಯಕ್ತಿಗಳ ಹೆಸರು ಲಭ್ಯವಿಲ್ಲ. ಬೇಗೂರನ್ನು ವಿರಕ್ತಗೊಡಗೆ ಕಪ್ಪರಗೊಡಗೆಯಾಗಿ ಕೊಟ್ಟಿರುವುದು ತಿಳಿಯುತ್ತದೆ.ಬೇರಂಬಾಡಿ ಗ್ರಾಮದ ಚಾವಡಿಯ ಮುಂದೆ ನಿಂತಿರುವ ಕ್ರಿ.ಶ 1562ನೇ ಜುಲೈ 20ರ ಕಾಲದ ಈ ಕಲ್ಲು ಶಾಸನದಲ್ಲಿ ವಿಜಯನಗರದ ರಾಮರಾಜ ದೇವರ ಊಳಿಗದ ಬಸಪ್ಪಗೌಡನು ತೆರಕಣಾಂಬಿಯ ಹೊನ್ನಪ್ಪಗಣಾಚಾರಿಗೆ ಕಾಳಾಂಚಿಯಾಗಿ ವಿಜಯಾಪುರದ ಸೀಮೆಯಲ್ಲಿ ಬರುವ ಬೇರಂಬಾಡಿ ಗ್ರಾಮವನ್ನು ಆಯಗಳ ಸಹಿತ ಬಿಟ್ಟ ವಿಚಾರವಿದೆ.

ಬೊಮ್ಮನಹಳ್ಳಿ ಗ್ರಾಮಕ್ಕೆ ವಾಯುವ್ಯ ತೋಪಿನಲ್ಲಿರುವ ಕ್ರಿ.ಶ. 1492–1493ರ ಕಾಲದ ಈ ಶಾಸನ ತ್ರುಟಿತವಾಗಿದೆ.ಉಮ್ಮತ್ತೂರಿನ ನಂಜರಾಜ ಒಡೆಯನ ಮಂತ್ರಿಯ ಪ್ರಧಾನನಾದ ದೇವರಾಯನ ಮಗ ಪರ್ವತಯ್ಯನು ತ್ರಿಯಂಬಕದೇವರಿಗೆ ಬೊಮ್ಮನಹಳ್ಳಿಯನ್ನು ದತ್ತಿಬಿಟ್ಟ ವಿಚಾರವಿದೆ.ಮಡೆಹಳ್ಳಿ ಗ್ರಾಮದ ಮನೆಯೊಂದರ ಹಿಂದೆ ನಿಂತಿರುವ ಕ್ರಿ.ಶ. 1374ನೇ ಡಿಸೆಂಬರ್ 24ರ ಈ ಶಾಸನದಲ್ಲಿ ಚಿಕ್ಕಕಂಪಣ ಒಡೆಯನ ಮಗ ಕುಮಾರ ನಂಜಣ್ಣ ಒಡೆಯನು ತಮ್ಮ ತಂದೆ ಸ್ವರ್ಗಸ್ಥರಾದ ಸಮಯದಲ್ಲಿ ವಿಜಯಪುರದ (ಗುಂಡ್ಲುಪೇಟೆ) ರಾಮನಾಥ ದೇವರಿಗೆ ಅಮೃತಪಡಿಗಾಗಿ ಕುಡುಗುನಾಡ ಮಡಹಳ್ಳಿಯನ್ನು ದತ್ತಿಯಾಗಿ ಬಿಟ್ಟ ವಿಷಯವಿದೆ.ಮಸಹಳ್ಳಿ ಊರ ಮುಂದೆ ನಿಂತಿರುವ ಕ್ರಿ.ಶ. 1546ನೇ ಸೆಪ್ಟೆಂಬರ್ 12ರ ಕಾಲಮಾನದ ಈ ಕಲ್ಲು ಶಾಸನವು ವಿಜಯನಗರದ ಸದಾಶಿವರಾಯನ ಅಳಿಯ ರಾಮರಾಯ ತೆರಕಣಾಂಬಿ ರಾಜ್ಯವನ್ನು ಆಳುತ್ತಿದ್ದು, ಈ ಪ್ರದೇಶಕ್ಕೆ ರುಸ್ತುಂಖಾನ್ ಎಂಬ ಮುಸಲ್ಮಾನ ನಾಯಕನನ್ನು ನೇಮಿಸಿದ್ದನು.ಆ ಸಮಯದಲ್ಲಿ ವಿಜಯಪುರದ (ಗುಂಡ್ಲುಪೇಟೆ) ವ್ಯಾಪ್ತಿಗೆ ಬರುವ ಮಸಹಳ್ಳಿ, ಮರುಜವಳಿಪುರ, ಕೆಂಗಹಳುಪುರ, ಗ್ರಾಮದ ತೋಟಗದ್ದೆಗಳನ್ನು ಹಲಗೆ ಒಡೆಯರಿಗೆ ಗುತ್ತಿಗೆಯಾಗಿ ಕೊಟ್ಟ ವಿಚಾರವಿದೆ.

ಮಂಚಹಳ್ಳಿ ಗ್ರಾಮದ ಮಲ್ಲೇದೇವರ ಗುಡಿಯ ಮುಂದೆ ಬಿದ್ದಿರುವ 16ನೇ ಶತಮಾನದ ಈ ತುಂಡು ಶಾಸನವು ತ್ರುಟಿತವಾಗಿದ್ದು, ಮಂಚಹಳ್ಳಿಗೆ ಕೊಟ್ಟ ದತ್ತಿಯನ್ನು ತಿಳಿಸುತ್ತದೆ.ರಾಘವಾಪುರ ಗ್ರಾಮದ ರಾಮೇಶ್ವರ ದೇವಾಲಯದ ಬಳಿ ಕ್ರಿ.ಶ.1507ನೇ ಏಪ್ರಿಲ್ 17ರ ಕಾಲದ ಈ ಶಾಸನವು ವೀರಚಿಕ್ಕರಾಜಒಡೆಯರ ಕಾಲಕ್ಕೆ ಸೇರಿದ್ದು ನಂಜನಗೂಡು ನಂಜುಂಡೇಶ್ವರ ದೇವರ ಅಮೃತಪಡಿಗೆ ರಾಘವಪುರ, ಹೊಂಪುರಗಳಿಂದ ಸಲ್ಲಬೇಕಾದ ಸುಂಕದ ಬಗೆಗೆ ತಿಳಿಸುತ್ತದೆ.ಇದೇ ಗ್ರಾಮಕ್ಕೆ ಪೂರ್ವ ಇರುವ ಹೊಲವೊಂದರಲ್ಲಿ ನೆಟ್ಟ ಕ್ರಿ.ಶ. 1320ರ ಈ ಕಲ್ಲು ಶಾಸನವು 3ನೇಬಲ್ಲಾಳ ಆಡಳಿತ ಕಾಲಕ್ಕೆ ಸೇರಿದ್ದು ಮಾಧವ ದಣ್ಣಾಯಕನ ಮಗನಾದ ಕೇತೆಯ ದಣ್ಣಾಯಕನು ಹೊಯ್ಸಳ ಬಲ್ಲಾಳ ಖಖಖ ನಿಂದ ಕುಡುಗುನಾಡಿನ ಗೊಮ್ಮಟಹಳ್ಳಿ ಮತ್ತು ಕಾಚಗೌಡನ ಮಾದೆಯಹಳ್ಳಿ ಎಂಬ ಎರಡು

ಗ್ರಾಮಗಳನ್ನು ಸ್ವೀಕರಿಸಿದನು.ಅರಮನೆಯ ಶ್ರೀಕರಣದ ರಾಘವದೇವನ ಮಗ ನಾರಣದೇವಣ್ಣನು ತನ್ನ ತಂದೆಯಾದ ರಾಘವದೇವನ ಹೆಸರಿನಲ್ಲಿ ಗೊಮ್ಮಟಹಳ್ಳಿಯನ್ನು 'ರಾಘವಪುರ' ಎಂದು ಪರಿವರ್ತಿಸಿ ಅಗ್ರಹಾರವನ್ನಾಗಿ ಮಾಡಿದ ವಿಚಾರ ತಿಳಿದುಬರುತ್ತದೆ.ಲಕ್ಕೂರು ಗ್ರಾಮದ ಚಾವಡಿಯ ಮುಂದೆ ನಿಂತಿರುವ ಕ್ರಿ.ಶ. 1665ನೇ ಜನವರಿ ೧ರ ಕಾಲದ ಈ ಶಾಸನವು ದೇವರಾಜ ಒಡೆಯರ ಕಾಲಕ್ಕೆ ಸೇರಿದ್ದು ಲಖಪ ಜ್ಯೋತಿಷ್ಕರಿಗೆ ಲಕ್ಕೂರು ಗ್ರಾಮದ ಗದ್ದೆ, ಬೆದ್ದಲು, ತೋಟವನ್ನು ದಾನಬಿಟ್ಟ ವಿಚಾರವಿದೆ.ವೀರನಪುರ ಊರ ಮುಂದಣ ಬಾವಿಕಟ್ಟೆಗೆನ್ ಇಲ್ಲಿಸಿರುವ ಕ್ರಿ.ಶ. 1860ನೇ ಜೂನ್ 3ರ ಕಾಲದ ಈ ಶಾಸನವು ವೀರನಪುರದ ಮಾದಪ್ಪನವರ ಮಕ್ಕಳಾದ ಮಲ್ಲಪ್ಪ ಹಾಗು ಇವರ ತಮ್ಮ ಮಾದಪ್ಪ ಬಾವಿಯನ್ನು ಪ್ರತಿಷ್ಠಾಪಿಸಿದ ವಿಚಾರ ತಿಳಿಯುತ್ತದೆ. ವೀರನಪುರ ಈ ಶಾಸನದಲ್ಲಿ ಇದೇ ಹೆಸರಿನಲ್ಲಿ ಉಲ್ಲೇಖವಾಗಿದೆ.ಶೆಟ್ಟಹಳ್ಳಿ ಗ್ರಾಮದ ಮಾಸ್ತಿಗುಡಿ ನೆಟ್ಟಿರುವ ಕ್ರಿ.ಶ. 1474ನೇ ಅಕ್ಟೋಬರ್ 4ರ ಕಾಲದ ಈ ಶಾಸನವು ಉಮ್ಮತ್ತೂರು ದೊರೆ ದೇವಣ್ಣ ಒಡೆಯನು ಅಲ್ಲಿನ ಸೋಮಯ್ಯ ದೇವರ ಅಂಗರಂಗಭೋಗ ಅಮೃತಪಡಿಗೆ ದತ್ತಿಬಿಟ್ಟ ವಿಚಾರವಿದೆ.

ಸಂಪಿಗೆಪುರ ಗ್ರಾಮದ ಮನೆಯೊಂದರ ಪೂರ್ವ ದಿಕ್ಕಿನ ಗೋಡೆಯಲ್ಲಿ ಕ್ರಿ.ಶ. 1610ನೇ ಅಕ್ಟೋಬರ್ 7ರ ಕಾಲದ ಈ ಶಾಸನವು ವಿಜಯನಗರದ ತಿರುಮಲರಾಜಯ್ಯನ ಆಳ್ವಿಕೆಗೆ ಸೇರಿದ್ದು ರಾಮಾನುಜ್ಯನು ತನ್ನ ಮಗ ಮರಿಯಣ್ಣನಿಗೆ ಸಂಪಿಗೆಪುರ ಗ್ರಾಮವನ್ನು ಉಂಬಳಿಯಾಗಿ ಕೊಟ್ಟ ವಿಚಾರವಿದೆ.ಸೋಮಹಳ್ಳಿ ಊರ ಮುಂದೆ ಬಿದ್ದಿರುವ ಕ್ರಿ.ಶ. 1576ನೇ ಅಕ್ಟೋಬರ್ 12ರ ಕಾಲದ ಈ ಶಾಸನವು ಮಂಡಳೇಶ್ವರ ವೀರಪ್ರತಾಪ ಶ್ರೀರಂಗರಾಜ ಮಹಾರಾಯರ ಆಳ್ವಿಕೆಗೆ ಸಂಬಂಧಿಸಿದ್ದು ತೆರಕಣಾಂಬಿಯ ಛತ್ರಕ್ಕೆ ಸೋಮಹಳ್ಳಿಯಿಂದ ಸಲ್ಲಬೇಕಾದ ದತ್ತಿಯ ಬಗೆಗೆ ವಿವರವಿದೆ. ಇದೇ ಗ್ರಾಮದ ಬಸವನಗುಡಿ ಬಳಿ ಇರುವ ಕ್ರಿ.ಶ. 1476ನೇ ಡಿಸೆಂಬರ್ 25ರ ಕಾಲದ ಈ ಶಾಸನವು ಉಮ್ಮತ್ತೂರಿನ ವೀರ ಇಮ್ಮಡಿರಾಯನ ಆಳ್ವಿಕೆಗೆ ಸಂಬಂಧಿಸಿದ್ದು, ನಂಜನಗೂಡು ನಂಜುಂಡೇಶ್ವರ ದೇವರ ಸಮೀಪದಲ್ಲಿ ನೆಲೆಸಿದ ವೀರಭದ್ರದೇವರ ಕಲ್ಲುಮಂಟಪಕ್ಕೆ ಹಾಗು ತೆರಕಣಾಂಬಿ ನಾಡಿಗೆ ಸೋಮಹಳ್ಳಿಯಿಂದ ಬರಬೇಕಾದ ತೆರಿಗೆಯ ಬಗೆಗೆ ತಿಳಿಸುತ್ತದೆ. ಇದೇ ಗ್ರಾಮದ ಬ್ರಾಹ್ಮಣರ ವೃತ್ತಿಯ ಕ್ರಿ.ಶ. 1422ನೇ ಆಗಸ್ಟ್ 2ರ ಕಾಲದ ಈ ತಾಮ್ರ ಶಾಸನವು ವಿಜಯನಗರದ ವೀರ ಹರಿಹರರಾಯರ ಕಾಲಕ್ಕೆ ಸೇರಿದ್ದು, ವೀರ ಹರಿಹರರಾಯನು ತಮ್ಮ ತಂದೆಯಾದ ದೇವರಾಯನ ನೆನಪಿಗಾಗಿ 'ಸೋಮಹಳ್ಳಿ' ಗ್ರಾಮವನ್ನು 'ದೇವರಾಜಪುರ'ವೆಂಬ ಅಗ್ರಹಾರವನ್ನಾಗಿ ಮಾಡಿ ಬ್ರಾಹ್ಮಣರಿಗೆ ದತ್ತಿಬಿಟ್ಟ ವಿಚಾರವಿದೆ.

ಹಸುಗೂಲಿ ಊರ ಬಾಗಿಲಲ್ಲಿರುವ ಮಾಸ್ತಿಯಮ್ಮನ ಗುಡಿಯಲ್ಲಿರುವ ಕ್ರಿ.ಶ. 1546ನೇ ಮಾರ್ಚ್ 1ರ ಕಾಲದ ಈ ಶಾಸನವು ನಂಜನಗೂಡು ನಂಜುಂಡೇಶ್ವರ ದೇವರ ಅಮೃತಪಡಿಗೆ ಉಮ್ಮತ್ತೂರು ಪಾಳೆಯಗಾರರು ಹಸುಗೂಲಿ ಗ್ರಾಮವನ್ನು ಬಿಟ್ಟುಕೊಟ್ಟ ವಿಚಾರ ತಿಳಿದುಬರುತ್ತದೆ. ಇದೇ ಗ್ರಾಮದ ಸಿದ್ದರಾಮೇಶ್ವರ ದೇವಸ್ಥಾನದ ದಕ್ಷಿಣ ದಿಕ್ಕಿನ ಹೊರ ಭಾಗದ ಗೋಡೆಯ ಮೇಲೆ 13ನೇ ಶತಮಾನದ ಕ್ರಿ.ಶ.1287ನೇ ಆಗಸ್ಟ್ 17ರ ಕಾಲಮಾನದ ಈ ಮೊದಲ ಶಾಸನವು ಹಸುಗೂಲಿಯ ಮಂಚಮರಡಿಯ ಮಗ ಕಲಿ ರಾಮನಾಥ ದೇವರಗುಡಿಯ ಕಲ್ಲಿನ ಕೆಲಸಕ್ಕೆ ಗದ್ಯಾಣವನ್ನು ಕೊಟ್ಟ ವಿಚಾರ ತಿಳಿಸುತ್ತದೆ.ಹಳ್ಳದಪುರ ಬೇಚಿರಾಕ್ ಗ್ರಾಮದಲ್ಲಿರುವ ಬಸವನಗುಡಿ ಬಳಿ ಇರುವ ಕ್ರಿ.ಶ. 1550–51ರ ಕಾಲಮಾನದ ಈ ಶಾಸನವು ವಿಜಯನಗರದ ಸದಾಶಿವರಾಯನ ಆಳ್ವಿಕೆಗೆ ಸಂಬಂಧಿಸಿದ್ದು, ತೆರಕಣಾಂಬಿ ಸೀಮೆಯ ಕಲ್ಲಹಳ್ಳಿ ಸ್ಥಳದ ಹಳ್ಳದಪುರ ಗ್ರಾಮವನ್ನು ಅಗ್ರಹಾರವಾಗಿ ಮಾಡಿ ಆ ಊರಿನ ಆದಾಯವನ್ನು ಲಕ್ಷ್ಮೀಪತಿ ಅಯ್ಯನವರಿಗೆ ಕೊಟ್ಟ ವಿಚಾರವಿದೆ.

ಹಂಗಳ ಊರ ಬಾಗಿಲ ಬಳಿ ಬಿದ್ದಿರುವ ಕಲ್ಲು ಈ ಶಾಸನದಲ್ಲಿ ಯಾವುದೇ ಇಸವಿ ನಮೂದಾಗಿಲ್ಲ. ಮಂಡಳೇಶ್ವರ ತಿರುಮಲರಾಯನ ಆಳ್ವಿಕೆಗೆ ಸಂಬಂಧಿಸಿದ್ದು ಹಂಗಳದ 'ಕೆಲಸಿಗಳು' ಎಂಬ ಸಮುದಾಯಕ್ಕೆ ವಿಧಿಸಿದ ಸುಂಕವನ್ನು ತಿಳಿಸುತ್ತದೆ. ಇದೇ ಗ್ರಾಮದ ದಕ್ಷಿಣಕ್ಕೆ ಹೊಲವೊಂದರಲ್ಲಿ ನಿಂತಿರುವ ಕ್ರಿ.ಶ. 1656ನೇ ಮೇ12ರ ಕಾಲದ ಈ ಕಲ್ಲು ಶಾಸನವು ವಿಜಯನಗರದ ಶ್ರೀರಂಗರಾಯ ೩೩೩ನ ಆಳ್ವಿಕೆಯ ಕಾಲವಾಗಿದ್ದು, ಮೈಸೂರಿನ ದೊಡ್ಡದೇವರಾಜ ಒಡೆಯರ ಧರ್ಮಪತ್ನಿ ಅಮೃತಮ್ಮನವರು ಹೊರಕೇರಿ ಬಾಚಹಳ್ಳಿಯ ಹಂಗಳದ ಸ್ಥಳದಲ್ಲಿ ವೀರಶೈವ ಕಲ್ಲುಮಠವನ್ನು ನಿರ್ಮಿಸಿದ ವಿಚಾರವಿದೆ.ಹೂಕುಂದ ಗ್ರಾಮದ ನಿವೇಶನದಲ್ಲಿ ನಿಂತಿರುವ ಕ್ರಿ.ಶ. 1668ನೇ ಮೇ 30ರ ಕಾಲದ ಈ ಶಾಸನವು ಮೈಸೂರಿನ ದೇವರಾಜ ಒಡೆಯರು ನಂಜನಗೂಡು ತಾಲ್ಲೂಕು ಮಲ್ಲನಮೂಲೆಯಲ್ಲಿ ನೂತನ ವಿರಕ್ತಮಠವನ್ನು ಕಟ್ಟಿಸಿ ಪ್ರಣಮಪ್ಪ ಚೆನ್ನವೀರದೇವರೆಂಬ ವಿರಕ್ತದೇವರಿಗೆ ಹೂಕುಂದ ದೇಸಿಪುರ ಎಂಬ ಎರಡು ಗ್ರಾಮಗಳನ್ನು ದತ್ತಿಬಿಟ್ಟ ವಿಚಾರವಿದೆ.

ಹೂರದಹಳ್ಳಿ ಗ್ರಾಮದ ಮಾರಿ ಚಾವಡಿಯ ಬಳಿ ನಿಂತಿರುವ ಕ್ರಿ.ಶ. 1553ನೇ ಅಕ್ಟೋಬರ್ 8ರ ಕಾಲದ ಈ ಶಾಸನವು ವಿಜಯನಗರದ ಸದಾಶಿವರಾಯನ ಆಳ್ವಿಕೆಗೆ ಸಂಬಂಧಿಸಿದ್ದು ಮಹಾಮಂಡಲೇಶ್ವರ ಅವುಭಳರಾಜಯ್ಯದೇವ ಅರಸು ತೆರಕಣಾಂಬಿಯ ಗೋಪಾಲ ಕೃಷ್ಣದೇವಯ್ಯರಿಗೆ ಅಂಗರಂಗ ವೈಭೋಗ ಅಮೃತಪಡಿಗೆ ಮತ್ತು ತನ್ನ ತಂದೆಯಾದ ಸಿಂಗ ರಾಜಯ್ಯನಿಗೆ ಪುಣ್ಯವಾಗಲೆಂದು ಹೂರದಹಳ್ಳಿ ಗ್ರಾಮವನ್ನು ದಾನ ನೀಡಿದ ವಿಚಾರವನ್ನು ತಿಳಿಸುತ್ತದೆ.ಹೆಗ್ಗವಾಡಿ ಗ್ರಾಮದ ಶಿವಶಂಕರಸ್ವಾಮಿ ದೇವಸ್ಥಾನದ ಬಳಿ 14ನೇ ಶತಮಾನದ ಕ್ರಿ.ಶ.1327ನೇ ಏಪ್ರಿಲ್ 25ರ ಈ ಶಾಸನವು ಕೇತೆಯ ದಣ್ಣಾಯಕನ ಆಳ್ವಿಕೆಗೆ ಸಂಬಂಧಿಸಿದ್ದು ಹೆಗ್ಗವಾಡಿಯ ಶಿವನಯ್ಯ ದೇವರಿಗೆ ಬಿಟ್ಟಿದ್ದ ದೇವದಾನದ ಮಣ್ಣನ್ನು ರಾಮಯ್ಯನ ಮಗ ಸಣ್ಣಯ್ಯನಿಗೆ ಆ ಊರ ರಾಮಾಚಾರಿಯ ಮಗ ವೋಜನು ದೇವದಾನಕ್ಕೆ ಬಿಟ್ಟ ವಿಚಾರವಿದೆ.

ಹೊಣಕನಹಳ್ಳಿ ಗ್ರಾಮದ ನಿವೇಶನದಲ್ಲಿ ಪಶ್ಚಿಮಕ್ಕೆ ನೆಟ್ಟಿರುವ ಕ್ರಿ.ಶ. 1506ನೇ ಫೆಬ್ರವರಿ 27ರ ಈ ಶಾಸನವು ವಿಜಯನಗರದ ನರಸಿಂಹರಾಜನ ದಾನದ ಪ್ರಸ್ತಾಪದ ಜೊತೆಗೆ ದೇಪಣ್ಣ ಒಡೆಯರ ಮಗನಾದ ವೀರಚಿಕ್ಕರಾಜ ಒಡೆಯನು ಹೊಣಕನಹಳ್ಳಿಯನ್ನು ಅಗ್ರಹಾರವಾಗಿ ಮಾಡಿ ಅದಕ್ಕೆ 'ಚಿಕ್ಕರಾಯಪುರ'ವೆಂದು ಪುನರ್‌ನಾಮಕರಣ ಮಾಡಿರುವ ವಿಷಯವನ್ನು ತಿಳಿಸುತ್ತದೆ.ಹೊರೆಯಾಲ ಗ್ರಾಮದ ರಂಗನಾಥಸ್ವಾಮಿ ದೃಸ್ಥಾನದ ಎಡಗಡೆ ಕಟ್ಟೆಯಲ್ಲಿರುವ ಕ್ರಿ.ಶ. 1546ನೇ ನವೆಂಬರ್ 13ರ ಈ ಕಲ್ಲು ಶಾಸನವು ಉಮ್ಮತ್ತೂರಿನ ದಳವಾಯಿ ಕೃಷ್ಣಪ್ಪನಾಯಕನು ತಗಡೂರಿನ ಚಿಕಮಲಯಗೆ ಹೊರೆಯಾಲ ಗ್ರಾಮವನ್ನು ಉಂಬಳಿಯಾಗಿ ಕೊಟ್ಟವಿಚಾರವಿದೆ. ಗುಂಡ್ಲುಪೇಟೆ ಪ್ರದೇಶವನ್ನು ಗಂಗರು, ಚೋಳರು, ಹೊಯ್ಸಳರು, ಪದಿನಾಲ್ಕು ನಾಡರಸರು, ವಿಜಯನಗರದ ಅರಸರು, ಉಮ್ಮತ್ತೂರು ಪಾಳೇಯಗಾರರು, ಮೈಸೂರು ಒಡೆಯರು ಜೊತೆಗೆ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತ್ತು.ಪ್ರಮುಖವಾಗಿ ಹೊಯ್ಸಳರ ಸಾಮಂತರಾದ ಪದಿನಾಲ್ಕು ನಾಡರಸರು, ವಿಜಯನಗರ ಅರಸರ ಸಾಮಂತರಾದ ಉಮ್ಮತ್ತೂರು ಪಾಳೇಯಗಾರರ ನೇರ ಆಳ್ವಿಕೆಗೆ ಒಳಪಟ್ಟಿತ್ತು.ಪದಿನಾಲ್ಕು ನಾಡರಸರು ತಮ್ಮನ್ನು 'ದಣ್ಣಾಯಕರು' ಎಂದು ಕರೆದುಕೊಂಡರೆ, ಉಮ್ಮತ್ತೂರು ಪಾಳೇಯಗಾರರು ತಮ್ಮನ್ನು 'ಮಂಡಲೇಶ್ವರರು' ಎಂದು ಕರೆದುಕೊಂಡಿದ್ದಾರೆ.

ಹೀಗೆ, ಶಾಸನಗಳ ಹಿನ್ನೆಲೆಯಲ್ಲಿ ಗುಂಡ್ಲುಪೇಟೆ ತಾಲೋಕು ಪ್ರದೇಶದಲ್ಲಿನ ಗ್ರಾಮಗಳ ಸಾಂಸ್ಕೃತಿಕ ಇತಿಹಾಸವನ್ನು ವಿಸ್ತೃತವಾಗಿಯೆ ಸಾದರಪಡಿಸಿರುತ್ತದೆ ಎಂದು ಹೇಳಬಹುದು.

**ಗ್ರಂಥಋಣ**


1. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ – 3, ಗುಂಡ್ಲುಪೇಟೆ ತಾಲೋಕು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1974
2. ಎಪಿಗ್ರಾಫಿಯಾ ಕರ್ನಾಟಿಕ, ಚಾಮರಾಜನಗರ ತಾಲೋಕು, ಸಂಪುಟ – 4, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1974
3. ಡಾ.ಎಂ.ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
4. ಬಿ.ಎಸ್.ಸಣ್ಣಯ್ಯ, (ಸಂ), ರಾಜಾವಳಿ ಕಥಾಸಾರ
5. ಡಾ. ತಂಗರಾಲ ವೆಂಕಟಸುಬ್ಬರಾವ್, ಹಿಮವದ್‌ಗೋಪಾಲಸ್ವಾಮಿ ಕ್ಷೇತ್ರಮಹಾತ್ಮ್ಯೆ